ಶ್ರೀ ಎ. ಜಿ. ರಾಮಚಂದ್ರರಾವ್.—ಖಂಡಿತ ವಾಗಿಯೂ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಈ ಕಮಿಟಿಗಳನ್ನು ವಜಾಮಾಡತಕ್ಕ ಕಾಲ ಈಗ ಸನ್ನಿಹಿತವಾಗಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

ಶ್ರೀ ಟಿ. ಹನುಮಯ್ಯ.—ಈ ಎರಡು ಕಮಿಟಿಗಳಲ್ಲೂ ಹರಿಜನರ ಪ್ರಾತಿನಿಧ್ಯದ ಆವಶ್ಯಕತೆ ಇಲ್ಲ ಎಂದು ಹೇಳಿದಿರಿ. ಇದು ಯಾವಾಗ ಸ್ಪಾಮಿ ನಿಮಗೆ ಗೊತ್ತಾಯಿತು ?

ಅಧ್ಯಕ್ಷರು.—ಆವಶ್ಯಕತೆ ಇಲ್ಲ ಎಂದು ಹೇಳಲಿಲ್ಲ.

ಶ್ರೀ ಟಿ. ಹನುಮಯ್ಯ.—ಮತ್ತೆ ಏನು ಹೇಳಿದರು ಸ್ಪಾಮಿ ?

ಅಧ್ಯಕ್ಷರು.—ಅವರು ಹೇಳಿದ್ದನ್ನು ತಾವು ಕೇಳಬೇಕಾಗಿತ್ತು.

(ಸಭೆಯಲ್ಲಿ ನಗು !)

ಬಹಳ ಸಣ್ಣ ಕಮಿಟಿ ಆದ್ದರಿಂದ ಎಲ್ಲರಿಗೂ ಪ್ರಾತಿನಿಧ್ಯ ಕೊಡುವುದಕ್ಕಾಗುವುದಿಲ್ಲ, ಮುಂದೆ ನೋಡೋಣ ಎಂದು ಹೇಳಿದರು.

ಶ್ರೀ ಟಿ. ಹನುಮಯ್ಯ.—ಷೆಡ್ಯೂಲ್ಡ್ ಕ್ಯಾಸ್ಟಿನವರು ಮೈನಾರಿಟಿ ಕಮ್ಯೂನಿಟಿ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಆ ವಿಚಾರ ಅವರು ಹೇಳಲಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅವರಿಗೆ ಈ ಸಮಿತಿಯ ಮೆಂಬರುಗಳಾಗಿ ಕೆಲಸ ಮಾಡತಕ್ಕ ಶಕ್ತಿ ಇಲ್ಲ ಎಂದು ಏನಾದರೂ ಅವರನ್ನು ಈ ಸಮಿತಿಯ ಮೆಂಬರುಗಳನ್ನಾಗಿ ಮಾಡಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಯೂನಿವರ್ಸಿಟಿ ಕೌನ್ಸಿಲ್‌ನವರು ಮಾಡಿರುವುದು. They have given the best consideration to the matter.

Mr. SPEAKER.—The Hon'ble Member can take another opportunity to press his claim.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳನ್ನು ಚುನಾಯಿಸಬೇಕಾದರೆ ಮಲೆನಾಡಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಟ್ಟಿಲ್ಲ ಎಂಬ ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಆ ರೀತಿ ಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಲೆನಾಡಿಗೆ ಡಾಕ್ಟರುಗಳು ಮೈದಾನ ಪ್ರದೇಶದಿಂದ ಹೋಗುವುದಿಲ್ಲ ಎಂದು ಹೇಳಿ ಈ ಹಿಂದೆ ಹತ್ತಾರು ವರ್ಷಗಳಿಂದ ಹೆಚ್ಚುಮಂದಿ ಮಲೆನಾಡಿನ ವಿದ್ಯಾರ್ಥಿಗಳಿಗೇ ಜಾಗ ಕೊಡಬೇಕು. ಆ ರೀತಿ ಅವರಿಗೆ ಶಿಕ್ಷಣ ಕೊಟ್ಟು ಮಲೆನಾಡಿಗೆ ಡಾಕ್ಟರುಗಳನ್ನು ಕಳುಹಿಸಬೇಕು ಎಂಬ ಯೋಚನೆ ಸರ್ಕಾರದವರಿಗಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಗಮನದಲ್ಲಿಟ್ಟು ಕೊಂಡೇ ಸರ್ಕಾರದವರು ಸೂಕ್ತವಾದ direction ಅನ್ನು ಆ Notification ಅಲ್ಲಿ ಸೇರಿಸಿದ್ದಾರೆ.

Depressed Class Scholarships

Q.–388. Sri M. MADIAH (Nanjangud-Scheduled Castes).—

Will the Government be pleased to state :—

(*a*) whether they are aware that the representatives of the Scheduled Castes in the State are urging the Government both in the Houses of Legislature and in the Policy Committee and also in the D. C. Education Advisory Committee of the State to sanction adequate sum of money as additional grant for the current year (*i.e.*, 1954-55) to award D. C. Scholarships to the deserving poor scheduled castes students studying in high schools in the State ;

(*b*) whether they have passed orders sanctioning the required amount as additional grant for the above purpose;

(*c*) if the answer (*b*) *supra* is in the affirmative, the amount of additional grant sanctioned ;

(*d*) if the answer to (*b*) *supra* is in the negative, the reasons as to why orders have not been passed yet sanctioning additional grant for the said purpose ?

A.—Sri A. G. RAMACHANDRA RAO (Minister for Law and Education).—

(*a*) Yes.
(*b*) No.
(*c*) Does not arise.
(*d*) Financial condition of the State does not permit of any further grant.

Sri M. MADIAH.—May I know, Sir, whether the Government have called for information with regard to the number of applications received in various high schools of the State from the members of the Scheduled Castes for Depressed Class Scholarships ?

Sri A. G. RAMACHANDRA RAO.—That information I think has been given in connection with some other question.

Sri M. MADIAH.—May I know since how long the representatives of the Scheduled Castes are urging the Government to increase the allotment every year ?

Sri A. G. RAMACHANDRA RAO.—Yes, it has been urged.

Sri M. MADIAH.—May I know whether the just claims of the Scheduled Caste representatives to increase the allotment has been considered by the Government ?

Sri A. G. RAMACHANDRA RAO.—Yes.

Sri M. MADIAH.—Are not the Government thinking of increasing the allotment ?

Mr. SPEAKER.—The answer is given.

Sri M. MADIAH.—Is it a fact that the representatives of this House are very strongly urging the Government to reconsider this question of allotment through an additional grant for the current year ?

Sri A. G. RAMACHANDRA RAO.—Yes, that will be considered.

Sri M. MADIAH.—Will it be considered and adequate allotment made for the purpose ?

Sri A. G. RAMACHANDRA RAO.—I can say, the best consideration will be given.

Sri M. MADIAH.—May I know whether it is not a fact that the Leader of the House declared at Mysore that the improvement of the conditions of the Scheduled Castes and Tribes is a sacred duty entrusted to Government ?

Mr. SPEAKER.—Not only the Government, you and I all know it.

Sri M. MADIAH.—Is this not sacred ?

Sri A. G. RAMACHANDRA RAO.—That is not the only piece of work. It is a very comprehensive work, made evincing the amount of interest this Government have in the matter ; that indicates the earnestness and interest that the Government is taking and want to take in the matter.

Sri G. DUGGAPPA.—Will the Government be pleased to state the total number of scholarships during the current year for boys and girls of Scheduled Castes ?

Sri A. G. RAMACHANDRA RAO.—I believe that statistics has been furnished : if not, I will get the information.

Sri G. DUGGAPPA.—What is the basis on which Government is going to allot these scholarships ?

Sri A. G. RAMACHANDRA RAO.—Considering all the damands as well as the availability of the resources.

Sri G. DUGGAPPA.—If the number of applications are more, is it not necessary to increase the funds ?

Sri A. G. RAMACHANDRA RAO.—I have answered that question, Sir. Necessity has to be reconciled with the adequacy of the resources ; that is a matter of adjustment.

Sri G. DUGGAPPA.—Is it not a fact that the allotment has been the same for many years ?

Sri A. G. RAMACHANDRA RAO.—Yes ; year after year allotments are being made.

Sri G. DUGGAPPA.—My question is, whether it is not a fact that the amount allotted for scholarships is the same for many years.

Sri A. G. RAMACHANDRA RAO.—For some years it is the same.

Sri G. DUGGAPPA.—Should it not be increased proportionately when the number of applications for scholarships are on the increase ?

Sri A. G. RAMACHANDRA RAO.—I do not think that there is any ratio kept for the purpose, nor is it possible. I do not want to enter into details at this stage.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ವಿದ್ಯಾರ್ಥಿವೇತನಗಳನ್ನು ಮುಂದಿನ ವರ್ಷ ಜಾಸ್ತಿಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್—ಇದನ್ನು ಪುನಃ ಪರ್ಯಾಲೋಚಿಸುತ್ತೇವೆಂದು ಹೇಳಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ಕೊಟ್ಟಿರುವುದು ಸಾಲದು, ಆದಷ್ಟು ಜಾಗ್ರತೆ ಜಾಸ್ತಿ ಮಾಡಿ ಕೊಡುತ್ತೀರಾ ?

Sri A. G. RAMACHANDRA RAO.—That will be kept in view.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಒಬ್ಬ ವಿದ್ಯಾರ್ಥಿಗೆ ಎಷ್ಟು ವಿದ್ಯಾರ್ಥಿವೇತನ ಕೊಡುತ್ತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿಡ್ಲ್ ಸ್ಕೂಲುಗಳಲ್ಲಿ 3 ರೂಪಾಯಿಗಳು, ಹೈಸ್ಕೂಲುಗಳಲ್ಲಿ 7½ ರೂಪಾಯಿಗಳು.

ಶ್ರೀ ಜಿ. ಪುಟ್ಟಸ್ವಾಮಿ.—ಈ ವಿದ್ಯಾರ್ಥಿವೇತನ ಎಷ್ಟು ವರ್ಷಗಳ ಹಿಂದೆ ನಿಗದಿ ಮಾಡಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ವರ್ಷಗಳಿಂದ ಇದೇ ದರವಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಕೊಡುತ್ತಿರುವ ವಿದ್ಯಾರ್ಥಿವೇತನ ವಿದ್ಯಾರ್ಥಿಗಳಿಗೆ ಸಾಕಾಗುವುದಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—That question has been put and answered.

ಶ್ರೀ ಜಿ. ಪುಟ್ಟಸ್ವಾಮಿ.—ಹಿಂದಿನ ಅಧಿವೇಶನದಲ್ಲಿ ಈ ಖಾತೆ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಈ

(ಶ್ರೀ ಜಿ. ಪುಟ್ಟಸ್ವಾಮಿ.)

ವೇತನಕ್ಕೆ ಗ್ರಾಂಟು ಹೆಚ್ಚಿಸುತ್ತೀವೆ ಎಂದು ಭರವಸೆ ಕೊಟ್ಟಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಹೇಳಿರಲಿಲ್ಲ, ಪರ್ಯಾಲೋಚಿಸುತ್ತೀವೆಂದು ಹೇಳಿತ್ತು. ಪರ್ಯಾಲೋಚನೆ ಮಾಡಲಾಯಿತು. ಈ ವರ್ಷ ಹೋದವರ್ಷಕ್ಕಿಂತ ಬಡ್ಜೆಟ್ಟಿನಲ್ಲಿ ಖೋತಾ ಜಾಸ್ತಿಯಾದ್ದರಿಂದ ಹೆಚ್ಚಿಸುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಗ್ರಾಂಟು ಕಡಮೆಯಾಗಿರುವುದರಿಂದ ಬಹಳ ಜನರು ವಿದ್ಯಾಭ್ಯಾಸ ಮಾಡುವುದನ್ನೇ ನಿಲ್ಲಿಸಿದ್ದಾರೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಕಾರಣದಿಂದ ನಿಲ್ಲಿಸಿದ್ದಾರೆಂಬುದು ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಡಿಪ್ರೆಸ್ಡ್ ಕ್ಲಾಸ್ ಸಮಿತಿಯವರು ಮತ್ತು ಪಾಲಸಿ ಸಮಿತಿಯವರು ಈ ಗ್ರಾಂಟು ಸಾಲದು, ಹೆಚ್ಚಾಗಿ ಕೊಡಬೇಕು ಎಂದು ಶಿಫಾರ್ಸು ಮಾಡಿದ್ದಾರೆಯೆ ?

ಅಧ್ಯಕ್ಷರು.—ಅದನ್ನು ಹೇಳಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಈಗ ಬಂದಿರುವ ಅರ್ಜಿಗಳೆಷ್ಟು, ಎಷ್ಟು ಹಣವಿದೆ, ಎಷ್ಟು ಜನರಿಗೆ ಸಿಕ್ಕುತ್ತದೆ ಯಾವ ರೀತಿಯೋ ಪ್ರಕಾರ ಸಿಕ್ಕುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಅಂಕಿಅಂಶ ಒದಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈಗಿರುವ ಗ್ರಾಂಟನ್ನು ಯಾವ ವರ್ಷ ನಿಗದಿಮಾಡಲಾಯ್ತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ ವರ್ಷಗಳಿಂದ ಈ ಗ್ರಾಂಟನ್ನು ಇದೇ ರೀತಿ ಕೊಡುತ್ತಿದೆಯೆಂದು ಹೇಳಿದೆ.

ಶ್ರೀ ಕೆ. ಪ್ರಭಾಕರ್.—ಮೊದಲನೆಯ ಸಲ ಯಾವ ವರ್ಷ ಇದನ್ನು ಗೊತ್ತು ಮಾಡಲಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ವೇತನವನ್ನು ವಿಶ್ವವಿದ್ಯಾನಿಲಯಕ್ಕೂ ಮತ್ತು ಇತರ ವಿದ್ಯಾ ಸಂಸ್ಥೆಗಳಿಗೂ ಬೇರೆಬೇರೆ ನಿಗದಿ ಮಾಡಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ವರ್ಷೇವರ್ಷೇ ವಿಶ್ವವಿದ್ಯಾನಿಲಯದಲ್ಲಿ ಈ ಹಣ ಲ್ಯಾಪ್ಸ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಹೋದ ವರ್ಷ ಹಣ ಉಳಿಯಿತು. ಆ ಹಣವನ್ನು ಅದಕ್ಕೇ ಉಪಯೋಗಿಸಬೇಕೆಂದು ಪ್ರಯತ್ನ ಮಾಡಲಾಯಿತು. ಆದರೆ ಖೋತ ಬಡ್ಜೆಟ್ ಹೆಚ್ಚಿದ್ದರಿಂದ ಅದಕ್ಕೆ ಸೂಕ್ತತೆ ಕಾಣಲಿಲ್ಲ. ಆದ್ದರಿಂದ ನಿಲ್ಲಿಸಿದೆ.

ಶ್ರೀ ಟಿ. ಹನುಮಯ್ಯ.—ಮೇಜರ್ ಮತ್ತು ಮೈನರ್ ಕಮ್ಯೂನಿಟಿಗಳಿಗೆ ಯಾವ ದಾಮಾಷಾ ಪ್ರಕಾರ ಅಲಾಟ್ ಮಾಡಲಾಗುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ವಿಂಗಡಿಸಿಲ್ಲ; ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಡಿಪ್ರೆಸ್ಡ್ ಕ್ಲಾಸ್ ಎಂದು ವಿಂಗಡಿಸಿ ಹಂಚುತ್ತಿದೆ.

Schools started in Rural Parts.

Q.—471. **Sri D. R. KARI GOWDA** (Hassan).—

Will the Government be pleased to state :—

(*a*) the number of primary schools newly sanctioned in rural parts in the State during the year 1954-55 ; the number of middle schools, and the number of high schools ;

(*b*) the number in each district ?

A.—**Sri A. G. RAMACHANDRA RAO** (Minister for Law and Education).—

(*a*) Primary Schools ... Nil
Middle Schools ... 4
High Schools ... 2

(*b*)—

	Bangalore District.	*Chikmagalur District.*	*Shimoga District.*
Primary Schools ...	Nil	Nil	Nil
Middle Schools ...	1	2	1
High Schools ...	1	Nil	1

ಶ್ರೀ ಡಿ. ಆರ್. ಕರಿಗೌಡ.—ಕೇವಲ 4 ಮಾತ್ರ ಮಾಧ್ಯಮಿಕ ಶಾಲೆಗಳನ್ನು ಸಂಸ್ಥಾನಾ ಮಳೆ ಕೊಟ್ಟಿದೆ. ಬೇರೆ ಯಾವ ಜಿಲ್ಲೆಯವರೂ ಮಾಧ್ಯಮಿಕ ಶಾಲೆಗಳನ್ನು ಕೇಳಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಳಿದ್ದಾರೆ.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಅವರಿಗೇಕೆ ಕೊಟ್ಟಿರುವುದಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರ್ಥಿಕ ಮುಗ್ಗಟ್ಟಿನಿಂದ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಮುಂದೆ ಆರ್ಥಿಕ ಮುಗ್ಗಟ್ಟು ಹೀಗೇ ಇದ್ದರೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡುವುದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಸೂಕ್ತ ಪರಿಹಾರವನ್ನು ಸಾರ್ವಜನಿಕರೂ, ಸರ್ಕಾರದವರೂ ಸೇರಿ ಕಂಡುಹಿಡಿಯಬೇಕು.

ಶ್ರೀ ಡಿ. ಆರ್. ಕರಿಗೌಡ.—ಈಗ ನ್ಯೂ ಟೈಪ್ ಮಿಡ್ಲ್ ಸ್ಕೂಲುಗಳನ್ನು ಕೊಡುವುದನ್ನು ನಿಲ್ಲಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಡಿದರೆ ಕೊಡುತ್ತಿಲ್ಲ ಎಂಬುದು ತಮಗೇ ಅರ್ಥವಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಪ್ರೈಮರಿ ಸ್ಕೂಲುಗಳು ಹಾಸನ ಜಿಲ್ಲೆಗೆ ಹೆಚ್ಚಾಗಿ ಬೇಕೆಂದು ಅರ್ಜಿಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿವೆ, ಅದರ ಪ್ರಕಾರ ಅವಶ್ಯಕತೆಯಿದೆಯೆಂದು ಗೊತ್ತಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಆರ್ಥಿಕ ಮುಗ್ಗಟ್ಟಿರುವುದರಿಂದ ಪ್ರೈಮರಿ ಸ್ಕೂಲು ಕೊಡಬಾರದೆಂದು ಯೋಚಿಸಿದ್ದೀರಾ ?

ಶ್ರೀ ಎ. ಜಿ ರಾಮಚಂದ್ರರಾವ್.—ಕೊಡಬಾರದೆಂದಿಲ್ಲ, ಕೊಡುವುದಕ್ಕಾಗಿಲ್ಲವೆಂದು ಬಹಳ ವಿಷಾದವಾಗಿದೆ.